## ಪದಬಂಧ




ಎಡದಿಂದ ಬಲಕ್ಕೆ

1. ಅನ್ಯರಿಗೆ ಸಹಾಯ ಮಾಡುವುದೆಂದರೆ ಆತನಿಗೆ ಕಿಂಚಿತ್ತೂ ಶ್ರಮ ಇಲ್ಲ 4
3. ಈಗ ದೈನ್ಯನಾಗಿ ನಿಂತಿರುವವ ನಿಜವಾಗಿ ಒಬ್ಬ ರಾಕ್ಷಸ 3
4. ಶಹರವನ್ನು ಕಂಡರೆ ಸಾಕು, ಆಕೆಗೆ ತುಂಬ ಸಂತಸ 3
6. ನೂರು ತರಹದ ಪ್ರಶ್ನೆ ಕೇಳಿದರೂ ಒಂದಕ್ಕೂ ಉತ್ತರ ಇಲ್ಲ 4
7. ಅಣ್ಣನಿಗೆ ಮರು ಮಾತಿಲ್ಲ. ಏಕೆಂದರೆ ಅವನದು ಬರೀ ಆಜ್ಞೆ 3
9. ಪರಕೀಯರಿಗೆ ನೀಡಿದ ವಿವರಣೆ ತುಂಬ ತೀಕ್ಷ್ಣವಾಗಿತ್ತು 3
11. ಮಳೆಯಲ್ಲಿ ನೆನೆದು ಬಂದದ್ದು ಇದೇ ಒಂದು ಜೋಡಿ 3
13. ಅಧ್ಯಕ್ಷತೆ ವಹಿಸಲು ತಕ್ಕ ಸಾಮರ್ಥ್ಯ ಏನು? 3
15. ಅರ್ಧವನ್ನಷ್ಟೇ ಪ್ರದರ್ಶಿಸಿ ಇದ್ದಕ್ಕಿದ್ದಂತೆ ಅಲ್ಲೇ ಕಣ್ಮರೆ! 4
17. ತವರಿನತ್ತ ಹೊರಡುವುದೆಂದರೆ ಎಷ್ಟು ಬೇಗ ಬೇಗ! 3
18.ಮೂರ್ಖರಂತೆ ಮೋಸಕ್ಕೆ ಬಿದ್ದವರನ್ನು ಕಂಡರೆ ಅಯ್ಯೋ ಪಾಪ 3
19. ಧ್ವಜಾರೋಹಣ ನಡೆದ ದಿನ ಪೂರ್ತಿ ಬಿಡುವು 4

ಮೇಲಿನಿಂದ ಕೆಳಕ್ಕೆ

1. ಯಾವನಿಗಾದರೂ ಅಷ್ಟೆ, ಇರುವುದು ಇದೊಂದೇ ಭೂಮಿ 3
2. ಸಹೋದರರು ಕಂಡು ಬಂದದ್ದು ಅತ್ಯಂತ ವಿಸ್ತಾರ ಮರುಭೂಮಿ 3
3. ಧರಣಿಯ ಈಗಿನ ಪರಿಸ್ಥಿತಿ ಎಷ್ಟು ಕಷ್ಟದ್ದಾಗಿದೆ ನೋಡಿ 3
5. ವಿನಾಯಕನಿಗೆ ಆನೆ ಮುಖ; ಅವನ ಸೋದರನಿಗೆ...? 3
7. ಆದರಣೀಯರಾದ ಎಲ್ಲರಿಗೂ ಒಪ್ಪವಾಗುವಂತಹ ನಿವಾಸ 3
8. ತೋರಿಕೆಗಷ್ಟೇ ಆತ ಒಬ್ಬ ಅಲೆಮಾರಿ 3
9. ಸಂಪಾದನೆ ಮಾಡಿದ್ದೆಲ್ಲ ಆತನ ಪ್ರಕಾರ ದೇವರು ಕರುಣಿಸಿದ್ದು 3
10. ರಕ್ಷಣಾ ಖಾತೆ ಪಡೆದಾಕೆ ಅಪಾಯ ಮುಕ್ತೆ 3
12. ಮತ್ತೆ ಮತ್ತೆ ಪರ್ವತ ಹತ್ತುವುದರ ಪ್ರಾಮುಖ್ಯ ಏನು? 3
14. ಕಣ್ಮುಚ್ಚಿ ತೆಗೆವಷ್ಟೇ ಕಾಲ ಅದರ ಅಸ್ತಿತ್ವ 3
15. ಅರಿತವನಿಗೂ ಆತುರಗಾರನಿಗೂ ಏನು ವ್ಯತ್ಯಾಸ? 3
16. ಮನವಿಯನ್ನು ಸ್ವೀಕರಿಸಿದ್ದಕ್ಕೆ ವಂದನೆ 3

---

### 19–05–2022 ಉತ್ತರಗಳು

ಎಡದಿಂದ ಬಲಕ್ಕೆ

1. ಉಭಯ 3. ಇಣಚಿ 4. ಕ್ಷಿತಿಜ 6. ತರುಣಿ 7. ಕರಡಿಗೆ 9. ದನದಾಹ (ದನ=ಧನ) 11. ಸುಧಾಕರ 13. ನರೋತ್ತಮ 15. ಬರಿದು 17. ಕರಿದು 18. ಬಾಲಕ 19. ಕುವರಿ

ಮೇಲಿನಿಂದ ಕೆಳಕ್ಕೆ

1. ಉಚಿತ 2. ಯಕ್ಷಿಣಿ 3. ಇಮ್ಮಡಿ 5. ಜವಾನ 7. ಕತ್ತರಿಸು 8. ಗೆಣೆಕಾರ 9. ದಟ್ಟವನ 10. ಹರಿನಾಮ 12. ಕನಕ 14. ರೋಚಕ 15. ಬದುಕು 16. ದುಬಾರಿ

ಪ್ರಶ್ನಾಂಕಣ

# ಖಗ ಸಂಖ್ಯಾ ಕುಸಿತ: ಏಕೆ? ಹೇಗೆ?

ಕೆಲವೇ ದಿನಗಳ ಹಿಂದೆ (5 ಮೇ 2022) ಖ್ಯಾತ ಅಂತರರಾಷ್ಟ್ರೀಯ ಜರ್ನಲ್ 'ಆನ್ಯುಯಲ್ ರಿವ್ಯೂ ಆಫ್ ಎನ್ವಿರಾನ್ಮೆಂಟ್ ಅಂಡ್ ರಿಸೋರ್ಸಸ್'ನಲ್ಲಿ ಇಳೆಯ ಗೆಳೆಯರಿಗೆಲ್ಲ ಆತಂಕ ತರುವ ಅಧ್ಯಯನ ವರದಿಯೊಂದು ಪ್ರಕಟವಾಗಿದೆ. ಕಾರ್ನೆಲ್ ಲ್ಯಾಬ್ ಆಫ್ ಆರ್ನಿಥಾಲಜಿ, ಬರ್ಡ್ ಲೈಫ್ ಇಂಟರ್ ನ್ಯಾಷನಲ್, ನೇಚರ್ ಕನ್ಸರ್ವೇಶನ್ ಫೌಂಡೇಶನ್, ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ ಇತ್ಯಾದಿ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ಸಹಕಾರದೊಡನೆ ಹಲವಾರು ವಿಜ್ಞಾನಿಗಳು ಜೊತೆಗೂಡಿ ಸಿದ್ಧಪಡಿಸಿರುವ ಜಾಗತಿಕ ಮಟ್ಟದ ಈ ಅಧ್ಯಯನ ವರದಿ ಇಡೀ ಪ್ರಪಂಚದ ಖಗವರ್ಗದ ಪ್ರಸ್ತುತ ಸ್ಥಿತಿ ಕುರಿತದ್ದಾಗಿದೆ. ಧರೆಯ ಪಕ್ಷಿ ಸಾಮ್ರಾಜ್ಯ ಎಂಥ ಸಂಕಷ್ಟ ಸ್ಥಿತಿಯನ್ನು ಮುಟ್ಟಿದೆ ಎಂಬುದನ್ನು ಈ ವರದಿ ಸ್ಪಷ್ಟವಾಗಿ ಅಂಕಿಅಂಶಗಳೊಡನೆ ತೆರೆದಿಟ್ಟಿದೆ.

ಇದೇ ವರದಿಯ ಪ್ರಕಾರ ಪ್ರಸ್ತುತ ಧರೆಯಲ್ಲಿರುವ ಸುಮಾರು 11,000 ಖಗ ಪ್ರಭೇದಗಳ ಪೈಕಿ ಶೇ. 48 ಪ್ರಭೇದಗಳ (ಎಂದರೆ 5280 ಪ್ರಭೇದಗಳು) ಸಂಖ್ಯೆ ಕುಸಿಯುತ್ತಿದೆ! ಶೇ. 39ರಷ್ಟು ಪ್ರಭೇದಗಳ (ಎಂದರೆ 4290 ಪ್ರಭೇದಗಳು) ಸಂಖ್ಯೆಯಲ್ಲಿ ಸ್ಪಷ್ಟ ಏರಿಳಿತಗಳಿಲ್ಲದೆ ಸ್ಥಿರತೆ ಇದೆ. ಶೇ. 6 ರಷ್ಟು ಹಕ್ಕಿ ಪ್ರಭೇದಗಳ (ಎಂದರೆ 660 ಪ್ರಭೇದಗಳು) ಸಂಖ್ಯೆ ಏರುಗತಿಯಲ್ಲಿದೆ (ಇದರಲ್ಲಿ ನಮ್ಮ ರಾಷ್ಟ್ರೀಯ ಪಕ್ಷಿಯಾದ ನವಿಲು ಕೂಡ ಸೇರಿದೆ). ಉಳಿದ ಶೇ. 7ರಷ್ಟು ಪ್ರಭೇದಗಳ (ಎಂದರೆ 770 ಪ್ರಭೇದಗಳು) ಪರಿಸ್ಥಿತಿಯನ್ನು ತಿಳಿಯಲು ಸಾಧ್ಯವಾಗಿಲ್ಲ. ಪಕ್ಷಿಗಳ ಅರ್ಧದಷ್ಟು ಪ್ರಭೇದಗಳ ಪ್ರಸ್ತುತದ ಗಂಭೀರ ದುಸ್ಥಿತಿಗೆ ಮೂರು ಪ್ರಧಾನ ಕಾರಣಗಳನ್ನು ಅದೇ ತಜ್ಞರೇ ಗುರುತಿಸಿದ್ದಾರೆ. 'ಆವಾಸ ನಾಶ ಮತ್ತು ಬೇಟೆ' ಇವೆರಡಕ್ಕೂ ಮನುಷ್ಯರೇ ನೇರ ಕಾರಣವಾದರೆ 'ವಾಯುಗುಣ ಬದಲಾವಣೆ'ಯಿಂದ ಒದಗುತ್ತಿರುವ ಸಂಕಷ್ಟಗಳಿಗೆ ಮನುಷ್ಯರೇ ಪರೋಕ್ಷ ಕಾರಣ.




ಅರಣ್ಯ ನಾಶ, ಗಿಡ ಮರಗಳ ವಿನಾಶ, ಕೆರೆಕುಂಟೆಗಳ ಕಣ್ಮರೆ, ಕೃಷಿ ಭೂಮಿಯಲ್ಲಿ ವಿಪರೀತ ಕೀಟನಾಶಕಗಳ ಬಳಕೆ, ಹಕ್ಕಿಗಳ ವಲಸೆ ಮಾರ್ಗಗಳಲ್ಲಿ ಗಗನ ಚುಂಬಿ ಕಟ್ಟಡಗಳ ನಿರ್ಮಾಣ (ಇರುಳಿನಲ್ಲಿ ಕಾಣದ ಅಂಥ ಕಟ್ಟಡಗಳಿಗೆ ಬಡಿದು ಕೋಟ್ಯಂತರ ವಲಸೆ ಹಕ್ಕಿಗಳು ಸತ್ತು ಬೀಳುತ್ತವೆ) ಮಾಂಸಕ್ಕಾಗಿಯೂ, ಸಾಕುಹಕ್ಕಿ ದಂಧೆಗಾಗಿಯೂ ನಡೆವ ವಲಸೆಗಾರ ಹಕ್ಕಿಗಳ ಕಳ್ಳ ಬೇಟೆ (ಇವಕ್ಕಾಗಿ ಪ್ರತಿ ವರ್ಷ ನೂರಾರು ಕೋಟಿ ಹಕ್ಕಿಗಳನ್ನು ಹಿಡಿಯಲಾಗುತ್ತಿದೆ)... ಇತ್ಯಾದಿ ಮನುಷ್ಯ ಮೂಲ ನೇರ ವಿನಾಶಕಾರೀ ಕಾರಣಗಳ ಜೊತೆಗೆ ಹಕ್ಕಿಗಳ ಬದುಕಿನ ಲಯವನ್ನೇ ಅಧ್ವಾನಗೊಳಿಸುತ್ತಿರುವ ವಾಯುಗುಣ ಬದಲಾವಣೆಯ ವಿದ್ಯಮಾನಕ್ಕೆ ಹೊಂದಿಕೊಳ್ಳಲಾಗದೆ ಕೂಡ ಹಕ್ಕಿಗಳ ಸಂಖ್ಯೆ ಕುಸಿಯುತ್ತಿದೆ.

■ ಎನ್. ವಾಸುದೇವ್